ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ಬೇಳಿದ ಮಾತಿನಲ್ಲಿ ಬಹಳ ಅರ್ಥ ಇದೆ. ನನಗೂ ಬೇಕಾದಷ್ಟು ದೂರುಗಳು ಮುಖ್ಯವಾಗಿ ಸಣ್ಣ ಉದ್ದಿಮೆದಾರರಿಂದ ಬರುತ್ತಿವೆ. ಏಕೆಂದರೆ ಕೆ.ಎಸ್.ಎಫ್.ಸಿ.ಯವರು ನಿರ್ದಾಕ್ಷಿಣ್ಯವಾಗಿ ಜಪ್ತಿ ಮಾಡುತ್ತಾರೆ, ಬೀಗಮುದ್ರೆ ಹಾಕುತ್ತಾರೆ. ಮತ್ತೆ ಅವರ ಇಂಟರೆಸ್ಟ್ ರೇಟ್ ಕೂಡ ಸ್ಕಾಕ್ಷಿ ಮೀಟರ್ ತರಹ ಓಡುತ್ತಲೇ ಇರುತ್ತದೆ. ಇದು ಅತ್ಯಂತ ದುರ್ಭರವಾದ ಸನ್ನಿವೇಶ. ನಾನು ಹಿಂದೆ ಉದ್ದಿಮೆ ಮಂತ್ರಿಯಾಗಿ ಈ ಕಷ್ಟವನ್ನು ಅರಿತಿದ್ದೇನೆ. ಈ ಕಷ್ಟ ಸು ಆದರೂ ಕೂಡ ಇವತ್ತು ಬಹಳ ಅಕ್ಯೂಟ್ ಪಾಯಿಂಟ್ಗೆ ರೀಚ್ ಆಗಿದೆ. ಆದ್ದರಿಂದ ನಾನು ಕೆ.ಎಸ್.ಎಫ್.ಸಿ.ಯವರನ್ನು ವಿದ್ಯುಚ್ಛಕ್ತಿ ಮಂಡಲಿಯವರನ್ನು ಮತ್ತು ಸಣ್ಣ ಉದ್ದಿಮೆದಾರರ ಮಹಾ ಸಂಘದ ಪದಾಧಿಕಾರಿಗಳನ್ನು ಕರೆಸಿ ಒಂದು ಮೀಟಿಂಗ್ ಮಾಡಿ ಒಂದು ಸೂತ್ರವಾದಂಥ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

**ಬೆಳ್ಳಾರದ ಗೊಲ್ಲರಹಟ್ಟಿಕೆರೆ ನಿರ್ಮಾಣ ಕುರಿತು**

699 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಳ್ಳಾರದ ಗೊಲ್ಲರಹಟ್ಟಿ ಕೆರೆ ನಿರ್ಮಾಣಕ್ಕಾಗಿ ಈಗಾಗಲೇ ಸರ್ಕಾರ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ವಿವರ ಮತ್ತು ಇಲ್ಲಿಯವರೆಗೆ ಸರ್ಕಾರದಿಂದ ಪಾವತಿ ಆಗಿರುವ ಹಣವೆಷ್ಟು?*

*ಆ) ಆ ಕೆರೆಯ ನಿರ್ಮಾಣದ ಅಂದಾಜು ವೆಚ್ಚವೆಷ್ಟು?*

*ಇ) ಸರ್ಕಾರದವರು ಸ್ವಾಧೀನಪಡಿಸಿಕೊಳ್ಳಲು ಮತ್ತೊಮ್ಮೆ ಅಧಿಸೂಚನೆ ಹೊರಡಿಸಿರುವರೇ?*

*ಈ) ಕೇವಲ ಒಂದೇ ಕುಟುಂಬದ ಸೌಲಭ್ಯಕ್ಕಾಗಿ ಕೆರೆಯ ನಿರ್ಮಾಣ ಮಾಡುತ್ತಿರುವುದು ಮತ್ತು ಬೆಲೆ ಇಲ್ಲದ ಜಮೀನಿಗೆ, ಲಕ್ಷಾಂತರ ರೂಪಾಯಿಗಳನ್ನು ಬಿಡುಗಡೆ ಮಾಡಿ ಕಂದಾಯ ಇಲಾಖೆ ಮತ್ತು ನೀರಾವರಿ ಇಲಾಖೆಯವರು ಸರ್ಕಾರವನ್ನು ವಂಚಿಸುತ್ತಿರುವುದು ಸರ್ಕಾರವನ್ನು ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದ ಕ್ರಮವೇನು?*

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬೆಳ್ಳಾರದ ಗೊಲ್ಲರಹಟ್ಟಿ ಕೆರೆ ನಿರ್ಮಾಣಕ್ಕಾಗಿ 16 ಎಕರೆ 03 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು ಇದಕ್ಕೆ 11,35,626 ರೂ.ಗಳನ್ನು ಪಾವತಿ ಮಾಡಲಾಗಿದೆ.

ಜಂಟಿ ಮೋಜಣಿ ಆಳತೆಯ ಪ್ರಕಾರ 11 ಎಕರೆ 17 ಗುಂಟೆ ಹೆಚ್ಚುವರಿ ವಿಸ್ತೀರ್ಣವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದ್ದು ಈ ಹೆಚ್ಚುವರಿ ಜಮೀನಿಗೆ ಪರಿಹಾರ ಹಣವನ್ನು ನಿಗಧಿಪಡಿಸಿರುವುದಿಲ್ಲ.

ಆ) ಮಂಜೂರಾಗಿರುವ ಅಂದಾಜು ವೆಚ್ಚ 4.99 ಲಕ್ಷ ರೂಪಾಯಿಗಳು.

ಇ) ಜಂಟಿ ಮೋಜಣಿ ಆಳತೆಯ ಪ್ರಕಾರ ಹೆಚ್ಚುವರಿಯಾಗಿ ಭೂಸ್ವಾಧೀನಪಡಿಸಿಕೊಳ್ಳಬೇಕಾದ 11 ಎಕರೆ 17 ಗುಂಟೆ ಜಮೀನಿಗೆ ಅಧಿಸೂಚನೆ ಹೊರಡಿಸಲಾಗಿದೆ. ಇನ್ನಾವುದೇ ಅಧಿಸೂಚನೆ ಹೊರಡಿಸಿಲ್ಲ.

ಈ) ಈ ಕೆರೆ ನಿರ್ಮಾಣದಿಂದ 41 ಕುಟುಂಬಗಳು ನೀರಾವರಿ ಸೌಲಭ್ಯ ಪಡೆಯುತ್ತವೆ. ಭೂಸ್ವಾಧೀನಪಾದ ಜಮೀನುಗಳ ಬೆಲೆಯನ್ನು ಮಾರುಕಟ್ಟೆ ಬೆಲೆ ಮತ್ತು ವಾಸ್ತವಿಕ ಅಂಶಗಳ ಆಧಾರದ ಮೇಲೆ ನಿರ್ಧರಿಸಲಾಗಿರುತ್ತದೆ. ಆದ್ದರಿಂದ ಕಂದಾಯ ಇಲಾಖೆ ಹಾಗೂ ನೀರಾವರಿ ಇಲಾಖೆ ಸರ್ಕಾರವನ್ನು ವಂಚಿಸುತ್ತಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಈ ಕೆರೆಯ ಅಂದಾಜು ವೆಚ್ಚ 4.99 ಲಕ್ಷ ರೂಪಾಯಿಗಳು. ಈ ವೆಚ್ಚದಲ್ಲಿ ಅಕ್ವಿಸಿಷನ್ ಪಣವೂ ಸೇರಿರುತ್ತದೆ. ಆದರೆ ಅವರು 16 ಎಕರೆ ಸ್ವಾಧಿನ ಪಮಾಡಿಕೊಳ್ಳುವುದಕ್ಕೆ 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗ ಅದು ಸಾಲದು ಎಂದು ಹೇಳಿ ಇನ್ನೂ 12 ಎಕರೆಯನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಅಧಿಸೂಚನೆ ಹೊರಡಿಸಿದ್ದಾರೆ. ಒಂದು ವಿಚಾರ ಹೇಳುತ್ತೇನೆ. ನಾನೂ ಕೂಡಾ ಅಂದಾಜು ಸಮಿತಿಯ ಸದಸ್ಯನಾಗಿದ್ದೆ. ತಾವೂ ಕೂಡಾ ಸಚಿವರಾಗುವುದಕ್ಕಿಂತ ಮೊದಲು ಅಂದಾಜು ಸಮಿತಿಯ ಸದಸ್ಯರಾಗಿದ್ದಿರಿ. ಈ ವಿಷಯದಲ್ಲಿ ನಾವಿಬ್ಬರೂ ಭಾಗಿ ಆಗಿದ್ದೆವು. ಈ ವಿಚಾರದಲ್ಲಿ ಅಂದಾಜು ಸಮಿತಿಯಲ್ಲಿ ಕೂಡಾ ಚರ್ಚೆ ಆಗಿ ಒಂದು ನಿರ್ದೇಶನವನ್ನು ಸರ್ಕಾರಕ್ಕೆ ಕೊಟ್ಟಿದ್ದೆವು. ಈ ಬಗ್ಗೆ ಸಮಗ್ರವಾದ ವಿಚಾರಣೆ ಮಾಡತಕ್ಕ ಬಗ್ಗೆ ಲೋಕಾಯುಕ್ತಕ್ಕೆ ಒಪ್ಪಿಸಬೇಕೆಂಬ ವಿಚಾರವನ್ನು ಸರ್ಕಾರದ ಮುಂದೆ ಇಟ್ಟಾಗ ಅದನ್ನು ಸರ್ಕಾರ ಒಪ್ಪಿ ಲೋಕಾಯುಕ್ತಕ್ಕೆ ಕಳುಹಿಸುವುದರ ಬಗ್ಗೆ ಹೇಳಿದ್ದು ಪ್ರೊಸೀಡಿಂಗ್ಸ್‌ನಲ್ಲಿ ಇದೆ. ಅಷ್ಟು ನಿರ್ದೇಶನ ಕೊಟ್ಟರೂ ಕೂಡಾ ಇವತ್ತು ಮತ್ತೆ ಜಮೀನು ಬೇಕು ಎಂದು ಅಧಿಸೂಚನೆ ಹೊರಡಿಸತಕ್ಕ ಪ್ರಯತ್ನ ಮಾಡಿರಬೇಕಾದರೆ, ಸಚಿವರ ಅಂದಾಜು ಸಮಿತಿಯ ನಿರ್ದೇಶನವನ್ನು ಇವತ್ತು ಉಲ್ಲಂಘನೆ ಮಾಡಿರತಕ್ಕ ಅಧಿಕಾರಿಗಳು ಯಾರೇ ಇರಲಿ, ಅವರನ್ನು ಸಸ್ಪೆಂಡ್ ಮಾಡತಕ್ಕ ಪ್ರಯತ್ನವನ್ನು ಮಾಡುತ್ತೀರಾ? 49 ಕುಟುಂಬಗಳು ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಇಲ್ಲಿ 49 ಕುಟುಂಬಗಳಿಗೆ ನೀರಾವರಿ ಆಗುವುದಿಲ್ಲ. ತಾವೂ ಸಚಿವರಾದ ಮೇಲೆ ಆ ಕೆರೆಯನ್ನು ತೋರಿಸಿದ್ದೇನೆ. ಒಬ್ಬ ಶ್ರೀಮಂತೇನಿಗೆ ಸೇರಿದ 120 ಎಕರೆ ಜಮೀನು ಇದೆ. ಅವನದೇ ಜಮೀನು ಅಕ್ವೈರ್ ಆಗಿರತಕ್ಕದ್ದು. ಇದರಲ್ಲಿ ಕೆಲವು ಭಾಗ ಮುಳುಗಡೆಯಾಗಿ ಕಾಂಪನ್ಸೇಷನ್ ತೆಗೆದುಕೊಳ್ಳುತ್ತಿವ್ವಾನೆ. ಆ ಕೆರೆಯ ಅನುಕೂಲ ಕೂಡಾ ಅವನಿಗೇ ಆಗತಕ್ಕದ್ದು. ನೀರಾವರಿ ಅವನಿಗೇನೇ ಆಗತಕ್ಕದ್ದು. ಅವರ ಮನೆಯಲ್ಲಿರುವ ಆಳುಕಾಳುಗಳ ಹೆಸರನ್ನು ಸೇರಿಸಿ ಇವತ್ತು ಆ ಬಡವರ ಹೆಸರಿನಲ್ಲಿ ಲೂಟಿ ಮಾಡತಕ್ಕ ಕೆಲಸ ಮಾಡುತ್ತಿದ್ದಾರೆ. ನಿಮ್ಮ ಜೂನಿಯರ ಎಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಎಂಜಿನಿಯರ್ ಮತ್ತು ಅಸಿಸ್ಟೆಂಟ್ ಕಮೀಷನರ್ ಹೀಗೆ ಎಲ್ಲರೂ ಇದರಲ್ಲಿ ಶಾಮೀಲು ಆಗಿದ್ದಾರೆ. ಇವತ್ತು ಈ ವಿಚಾರ ಲೋಕಾಯುಕ್ತಕ್ಕೆ ರೆಫರ್ ಆಗಿದ್ದರೆ ಅದು ವಿಚಾರಣೆ ಆಗಿದೆಯೇ? ವಿಚಾರಣೆ ಆಗುವುದಕ್ಕೆ ತಡವಾಗಿದ್ದರೆ ನಿಮ್ಮ ಅಧಿಕಾರಿಗಳು ಯಾವುದೇ ಕಡತಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಿಲ್ಲ. ಅಥವಾ ಕೊಟ್ಟಿಲ್ಲ. ಇವತ್ತು ಅದನ್ನು ಕೊಟ್ಟಿದ್ದಾರಾ? ಏನಾಗಿದೆ? ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದರಲ್ಲಿ ಸರ್ಕಾರ, ಸರ್ಕಾರಿ ಅಧಿಕಾರಿಗಳು, ಶಾಮೀಲು ಆಗಿಲ್ಲವೇ? ದಯಮಾಡಿ ಈ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಡಾ॥ ಆರ್.ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ ಬೆಳ್ಳಾರದ ಗೊಲ್ಲರಹಟ್ಟಿ ಕೆರೆಯ ನಿರ್ಮಾಣಕ್ಕೆ ಮೊದಲು 16 ಎಕರೆ 3 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಆನಂತರ ಜಂಟಿ ಮೋಜಣಿ ಆಜ್ಞೆ ಪ್ರಕಾರ ಪುನಃ 11.17 ಎಕರೆ ಹೆಚ್ಚುವರಿ ಭೂಸ್ವಾಧೀನಪಡಿಸಿಕೊಳ್ಳಬೇಕೆಂದು ಪರಿಹಾರ ಹಣವನ್ನು ನಿಗಧಿಪಡಿಸಲಾಯಿತು. ಮೊದಲ 16 ಎಕರೆ 3 ಗುಂಟೆ ಜಮೀನನ್ನು ಏನು ಸ್ವಾಧೀನಪಡಿಸಿಕೊಳ್ಳಲಾಗಿದೆ ಅದು ಒಂದು ಫಲವತ್ತಾದ ಭೂಮಿ ಎಂದು ಎಕರೆಗೆ 15 ಸಾವಿರ ರೂಪಾಯಿ ಅಂದಾಜು ಮಾಡಿದ್ದಾರೆ. ಆ ಪ್ರಕಾರ 11,35,626 ರೂಪಾಯಿ ಪಾವತಿ ಮಾಡಲಾಗಿದೆ. ಮತ್ತೆ 11 ಎಕರೆ 17 ಗುಂಟೆ ಯಾವುದೇ ಹೆಚ್ಚುವರಿ ಪರಿಹಾರಧನವನ್ನು ಇದುವರೆಗೆ ನೀಡಿಲ್ಲ. ಮತ್ತೆ ತಾವು ಹೇಳಿದಹಾಗೆ ಅಂದಾಜು ಸಮಿತಿಯಲ್ಲಿ ನಾನೂ ಸದಸ್ಯನಾಗಿದ್ದೆ. ಆಗ ಈ ಅಪಸ್ವರ ಎದ್ದಿದ್ದು ನಿಜ. ಆಗ ಇದು ಲೋಕಾಯುಕ್ತಕ್ಕೆ ರೆಫರ್ ಆಯಿತು. ಲೋಕಾಯುಕ್ತದ ರಿಜಿಸ್ಟ್ರಾರ್ ಅವರು ಕೂಡ ಒಂದು ವಿವರವಾದ ಮಾಹಿತಿ ಕೇಳಿದ್ದಾರೆ. ಅದನ್ನು ಕೂಡಲೇ ಕಳುಹಿಸಬೇಕೆಂದು ನಾನೂ ಕೂಡಾ ನಮ್ಮ ಅಧಿಕಾರಿಗಳಿಗೆ ಆಜ್ಞೆ ಮಾಡಿದ್ದೇವೆ. ತಾವು ಒಂದೇ

ಕುಟುಂಬದ್ದು ಎಂದು ಹೇಳುತ್ತಿದ್ದೀರಿ. ಸಾಧಾರಣವಾಗಿ ಒಂದೇ ಕುಟುಂಬದ ಸಲುವಾಗಿ ಇಂತಹ ಒಂದು ಯೋಜನೆಯನ್ನು ಕೈಗೊಳ್ಳುವುದಕ್ಕಾಗುವುದಿಲ್ಲ. ಆದಾಗ್ಯೂ ಕೂಡಾ 41 ಕುಟುಂಬಗಳಿಗೆ ಅನುಕೂಲ ಆಗುವ ಒಂದು ನೀರಾವರಿ ಯೋಜನೆ ಎಂದು ನನಗೆ ಸಿಕ್ಕ ಮಾಹಿತಿ ಪ್ರಕಾರ ತಿಳಿದು ಬಂದಿದೆ. ಈ ಯೋಜನೆ ಜಿಲ್ಲಾಪರಿಷತ್ ವ್ಯಾಪ್ತಿಗೆ ಒಳಪಟ್ಟಿದ್ದು. ನಮ್ಮ ಮೈನರ್ ಇರಿಗೇಷನ್ ಇಲಾಖೆಗೆ ಒಳಪಟ್ಟಿಲ್ಲ. ಇದು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಇರುವುದರಿಂದ ನಿಧಾನವಾಗಿ ಈ ಮಾಹಿತಿಗಳು ಸಿಗುತ್ತಿವೆ. ಮತ್ತೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕೆಂದು ಹೇಳಿದ್ದೀರಿ. ಈಗಾಗಲೇ ಈ ವಿಚಾರ ಲೋಕಾಯುಕ್ತ ಮುಂದೆ ಇರುವುದರಿಂದ ಇದರ ಬಗ್ಗೆ ಸೂಕ್ತ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತೇನೆ. ಮತ್ತೆ 5 ಲಕ್ಷ ರೂಪಾಯಿ ಪರಿಹಾರದ ಬಗ್ಗೆ ಹೇಳಿದ್ದೀರಿ. ಅದನ್ನು ತಡೆಹಿಡಿಯುತ್ತೇನೆಂದು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಜಿಲ್ಲಾಪರಿಷತ್ತು ಹಾಗೂ ಸಣ್ಣ ನೀರಾವರಿ ಇಲಾಖೆ ಎಂದು ಹೇಳುತ್ತಿದ್ದೀರಿ. ಹಣವನ್ನು ವಿತರಣೆ ಮಾಡುವುದಕ್ಕೆ ನಾವು ಮಾಡಿರತಕ್ಕ ವ್ಯವಸ್ಥೆಯಲ್ಲಿ ಜಿಲ್ಲಾಪರಿಷತ್ತು ಎಂದು ಮಾಡಿರತಕ್ಕದ್ದು. ಆದರೆ ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ನ್ ಸರ್ಕಾರಕ್ಕೆ ಬರಬೇಕು. ತಾವು ಸಣ್ಣ ನೀರಾವರಿ ಖಾತೆ ಸಚಿವರು ಆಗಿದ್ದೀರಿ. ತಮಗೆ ಇದರ ಬಗ್ಗೆ ಕಂಟ್ರೋಲ್ ಇದೆ. ತಮಗೆ ಅಧಿಕಾರ ಇದೆ. ಜಿಲ್ಲಾಪರಿಷತ್ತು ಆದಾಕ್ಷಣ ತಾವು ಮಾಡಬಾರದು ಎಂದು ಇಲ್ಲ. ಇಲ್ಲಿ ಮುಖ್ಯವಾಗಿ ಬಂದರಿತಕ್ಕದ್ದು ಏನೆಂದರೆ ಎಂಜಿನಿಯರಿಂಗ್ ಇಲಾಖೆಯವರು, ಅಸಿಸ್ಟೆಂಟ್ ಕಮೀಷನರ್ ಶಾಮೀಲಾಗಿ 5 ಲಕ್ಷ ರೂಪಾಯಿಗಳ ಮುಗಿಯತಕ್ಕ ಕೆಲಸಕ್ಕೆ ಸುಮಾರು 40 ಲಕ್ಷ ರೂಪಾಯಿಗಳ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರಾದ್ದರಿಂದ ಹಣ ದುರ್ವ್ಯವಹಾರವಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಬೇಕು. ಈ ವಿಚಾರ ಲೋಕಾಯುಕ್ತಕ್ಕೆ ಹೋಗಿದೆ. ಅದ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ತಾವು ಹೇಳತಕ್ಕ ಪ್ರಕಾರವೇ ಸಲೇಷನ್ ಸೇರಿಕೊಂಡರೂ 3 ಲಕ್ಷ ರೂಪಾಯಿ ಆಗುವುದಿಲ್ಲ. ತಾವು ಉತ್ತರದಲ್ಲಿ ಎಕರೆಗೆ 15 ಸಾವಿರ ರೂಪಾಯಿ ಎಂದು ಹೇಳಿದ್ದೀರಿ. ಇದರಿಂದ 12 ಎಕರೆಗೆ ಎಷ್ಟು ಆಗುತ್ತದೆ? 12 ಲಕ್ಷ ಆಗುತ್ತದೆಯೇ? ಎಕರೆಗೆ 15 ಸಾವಿರ ಅಲ್ಲ, 85 ಸಾವಿರದಂತೆ ಕೊಟ್ಟಿದ್ದಾರೆ. ದಯಮಾಡಿ ಯಾರೊಬ್ಬರನ್ನಾದರೂ ಸಸ್ಪೆಂಡ್ ಮಾಡಿ. ಆಗ ಬುದ್ಧಿ ಬರುತ್ತದೆ. ಇದರಿಂದ ಮುಂದೆ ಆಗುವ ತಪ್ಪು ತಪ್ಪುತ್ತದೆ. ಮತ್ತು ಈ ಬಗ್ಗೆ ಸಮಗ್ರವಾದ ವಿಚಾರಣೆ ಮಾಡುವ ಬಗ್ಗೆ ಆಶ್ವಾಸನೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಡಾ॥ ಆರ್.ಬಿ. ಚೌಧ: ಮಾನ್ಯ ಅಧ್ಯಕ್ಷರೇ, ಪರಿಹಾರ ಕೊಟ್ಟಿದ್ದು ಸಲೇಷನ್ ಸೇರಿ; ಗಿಡ, ಮರ, ಬಾವಿ ಎಲ್ಲಾ ಕೂಡಿಸಿ 11 ಲಕ್ಷ ರೂಪಾಯಿ ಆಗಿದೆ. ಅದರ ಪ್ರಕಾರ ಕೊಟ್ಟಿದ್ದು ಆಗಿದೆ. ಆಗಲೇ ನಾನು ಹೇಳಿದ ಹಾಗೆ ಇದು ಲೋಕಾಯುಕ್ತ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಪರಿಶೀಲನೆ ಮಾಡಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

**ತಿರುಪತಿ ತಿರುಮಲೆಯ ಅತಿಥಿ ಗೃಹಗಳ ಸಂಖ್ಯೆ ಕುರಿತು**

454 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ಕಾನೂನು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಶ್ರೀ ತಿರುಮಲ ತಿರುಪತಿ ಕ್ಷೇತ್ರ ಪ್ರದೇಶದಲ್ಲಿ ಇರತಕ್ಕಂಥ ಸರ್ಕಾರದ ವಸತಿ ಗೃಹಗಳು ಎಷ್ಟು?*

*ಆ) ರಾಜ್ಯದಿಂದ ಅಲ್ಲಿಗೆ ಹೋಗತಕ್ಕಂತ ಯಾತ್ರಿಕರ ಸಂಖ್ಯೆಗನುಗುಣವಾಗಿ ವಸತಿ ಗೃಹಗಳನ್ನು ಕಲ್ಪಿಸಲಾಗಿದೆಯೇ?*